'ಹ ಹ... ನೀವೇ ಕೊಲೆ ಮಾಡಿ ನಮಗೆ ಹೇಗೆ ತಿಳಿಯಿತು ಅಂತಾ ಕೇಳ್ತಾ ಇದ್ದೀರಾ?' ಇನ್‌ಸ್ಪೆಕ್ಟರ್ ನಾಗೇಶ್ ಪ್ರಶ್ನಿಸಿದ.

'ಸರ್... ನಾನು ಕೊಲೆ ಮಾಡಿಲ್ಲ...' ರಾಕೇಶ್ ತೊದಲಿದ.

'ಹಾಗಾದರೆ ನಾವು ಒಳಗೆ ಬರುತ್ತಿರುವಾಗ ಯಾಕೆ ಓಡಿ ಹೋಗಲು ಪ್ರಯತ್ನಿಸುತ್ತ ಇದ್ರಿ? ನಮಗೆ ಹದಿನೈದು ನಿಮಿಷದ ಕೆಳಗೆ, ಇಲ್ಲಿ ಒಂದು ಸಾವು ಆಗಿದೆ ಅಂತ ಫೋನ್ ಬಂದಿತ್ತು. ನಾವು ಹೊರಟು ಬರುವಷ್ಟರಲ್ಲಿ ನೀವು ಸಾಕ್ಷ್ಯಗಳನ್ನೆಲ್ಲಾ ನಾಶಪಡಿಸಿ ಇಲ್ಲಿಂದ ಓಡಲೆತ್ನಿಸಿದ್ರಿ. ಅದೃಷ್ಟವಶಾತ್ ಅದೇ ಸಮಯಕ್ಕೆ ನಾವು ಬಂದೆವು, ನೀವು ಸಿಕ್ಕಿ ಹಾಕಿಕೊಂಡ್ರಿ... ಈಗ ಕೊಲೆ ಮಾಡಲಿಲ್ಲ ಅಂತೀರಾ?' ದೊಡ್ಡ ದನಿಯಲ್ಲಿ ಗದರಿದ ನಾಗೇಶ್.

'ಸರ್, ನಾನು ನಿಜ ಹೇಳ್ತಾ ಇದ್ದೀನಿ. ಇದು ಕೊಲೆ ಅಲ್ಲ. ಇವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಅದೂ ನನ್ನ ಕಣ್ಣ ಎದುರಿಗೇ.'

ಅಲ್ಲಿದ್ದವರೆಲ್ಲ ತಮ್ಮ ಕೆಲಸ ಬಿಟ್ಟು ಒಮ್ಮೆ ರಾಕೇಶನ ಕಡೆ ತಿರುಗಿದರು. ಅವನ ಆ ಮಾತುಗಳು ಇಡೀ ಕೇಸ್ ಅನ್ನು ತಿರುವು ಮುರುವಾಗಿ ನೋಡುವಂತೆ ಮಾಡಿತ್ತು.

'ನೀವ್ಯಾಕೆ ಇಲ್ಲಿ ಬಂದ್ರಿ?'

'ಸರ್, ಬೆಳಗ್ಗೆ ಇವರೇ ಫೋನ್ ಮಾಡಿ ಇಂದೇ ಬಾ ಎಂದು ಕರೆಸಿಕೊಂಡರು... ನಾನು ಒಂದು ಖಾಸಗಿ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ಇವರ ಮತ್ತು ಇವರ ಪತ್ನಿಯ ಜಾಯಿಂಟ್ ಅಕೌಂಟ್ ನಮ್ಮ ಬ್ಯಾಂಕ್‌ನಲ್ಲಿದೆ. ನಾನು ಇವರ ರಿಲೇಶನ್‌ಶಿಪ್ ಮ್ಯಾನೇಜರ್. ಕಳೆದ ಎರಡು ತಿಂಗಳಲ್ಲಿ ಇವರ ಪತ್ನಿ ಸುಮಾರು ಹದಿನೈದು ಲಕ್ಷ ಡ್ರಾ ಮಾಡಿದ್ದರು... ಅದನ್ನು ವಿಚಾರಿಸಲೆಂದು ನನ್ನನ್ನು ಕರೆಸಿದ್ದರು. ಇದು ಅವರ ಪತ್ನಿಗೆ ಸಂಬಂಧಿಸಿದ ವಿಷಯ ಆದ್ದರಿಂದ ಅವರಿಗೆ ಹೇಳಬೇಡ ಎಂದು ತಾಕೀತು ಮಾಡಿದ್ದರು.'

ರಾಕೇಶನ ಮಾತುಗಳನ್ನು ತಡೆಯುತ್ತಾ ಒಬ್ಬ ಕಾನ್‌ಸ್ಟೆಬಲ್, 'ಸರ್, ಸತ್ತಿರುವ ವ್ಯಕ್ತಿಯ ಹೆಸರು ಕೃಷ್ಣನ್... ವಯಸ್ಸು ಸುಮಾರು ಐವತ್ತೈದು ಅರವತ್ತಿರಬಹುದು, ಕೋಟ್ಯಧಿಪತಿ, ಚಿಕ್ಕಮಗಳೂರಿನಲ್ಲಿ ಕಾಫಿ ಎಸ್ಟೇಟ್ ಇದೆ. ಇಲ್ಲಿಯೂ ಬಹಳಷ್ಟು ಆಸ್ತಿ ಪಾಸ್ತಿ ಇದೆ. ಪತ್ನಿ ಇದ್ದಾರೆ, ಮಕ್ಕಳಿಲ್ಲ. ಅವರ ಫೋನ್‌ನಲ್ಲಿ ನಂಬರ್ ಹುಡುಕಿ, ಅವರ ಪತ್ನಿಗೆ ಕರೆ ಮಾಡಿ ಹೇಳಿದ್ದೇನೆ' ಎಂದು ಯಾಂತ್ರಿಕವಾಗಿ ವರದಿ ಒಪ್ಪಿಸಿ ಹೋದ.

'ಸರ್, ಮತ್ತೊಮ್ಮೆ ಹೇಳುತ್ತಿದ್ದೇನೆ... ಇದು ಕೊಲೆ ಅಲ್ಲ... ಇವರು ನನ್ನ ಕಣ್ಣ ಎದುರಿಗೇ ಆತ್ಮಹತ್ಯೆ ಮಾಡಿಕೊಂಡರು. ಅದೂ ನೀವು ಬರುವ ಐದು ನಿಮಿಷದ ಮೊದಲು... ನನ್ನನ್ನು ನಂಬಿ ಪ್ಲೀಸ್...' ಬೇಡಿಕೊಳ್ಳತೊಡಗಿದ ರಾಕೇಶ್. ಅವನ ಕಣ್ಣುಗಳಲ್ಲಿ ಆಗಲೇ ನೀರು ಸುರಿಯತೊಡಗಿತ್ತು. ಇನ್‌ಸ್ಪೆಕ್ಟರ್ ನಾಗೇಶನಿಗೆ ಅವನ ಮುಖ ನೋಡಿ ಅನುಕಂಪವಾಯಿತು. ಬ್ಯಾಂಕ್‌ನ ಒಬ್ಬ ನೌಕರ ತನ್ನ ಖಾತೆದಾರನ ಮನೆಗೆ ಬಂದು ಸುಖಾಸುಮ್ಮನೆ ಸಿಕ್ಕಿ ಹಾಕಿಕೊಂಡನಾ... ಅಂತ ಅನ್ನಿಸಿತು. ಆದರೆ ಅವನ ಪೊಲೀಸ್ ಬುದ್ಧಿ ಹೇಳಿತು, 'ಯೂನಿಫಾರಂ ತೊಟ್ಟ ದಿನದಿಂದಲೇ ನಂಬಿಕೆ ಎನ್ನುವ ಶಬ್ದ ನನ್ನ ಪದಕೋಶದಿಂದ ಅಳಿಸಿ ಹೋಗಿದೆ. ಎಲ್ಲರ ಮೇಲೆ ಸಂಶಯ ಪಟ್ಟು, ಆ ಸಂಶಯ ನಿವಾರಿಸಿಕೊಳ್ಳುವುದಕ್ಕಾಗಿಯೇ ನನಗೆ ಸಂಬಳ ಕೊಡುವುದು.'

ಇನ್‌ಸ್ಪೆಕ್ಟರ್ ನಾಗೇಶ್ ಭಯದಿಂದ ಕುಳಿತಿದ್ದ ರಾಕೇಶನನ್ನು ಒಮ್ಮೆ ನೋಡಿ ಆ ಶವದ ಕಡೆ ಮತ್ತೊಮ್ಮೆ ನೋಡಿದ.